2083/2082

**IV Semester/VI Semester 3 Years LL.B. Examination, June/July 2019**
**(2016-17 Batch)**
**LABOUR LAW – II**

Duration : 3 Hours Max. Marks : 100

**Instructions** : 1. Answer Q. No. **9** and **any five** of the **remaining** questions.

2. Q. No. **9** carries **20** marks and the **remaining** questions carry **16** marks **each**.

3. Answer should be written in **English** or **Kannada completely**.

Q. No. 1. Discuss briefly the various labour standards adopted by International Labour Organization (ILO) for the protection of industrial workers. How far has India ratified such standards in its labour legislations ? Marks : 16

ಔದ್ಯೋಗಿಕ ಕಾರ್ಮಿಕರ ಸಂರಕ್ಷಣೆ ದೃಷ್ಟಿಯಿಂದ ವಿಶ್ವ ಕಾರ್ಮಿಕ ಸಂಸ್ಥೆಯು ಅನುಮೋದಿಸಿರುವ ಹಲವು ಕಾರ್ಮಿಕ ಮಾನದಂಡಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ. ಭಾರತವು ಈ ಮಾನದಂಡಗಳನ್ನು ಎಷ್ಟರ ಮಟ್ಟಿಗೆ ತನ್ನ ಕಾರ್ಮಿಕ ಕಾನೂನುಗಳಲ್ಲಿ ಅನುಷ್ಠಾನಗೊಳಿಸಿದೆ ?

Q. No. 2. Elucidate the objectives of the Child Labour (Prohibition and Regulation) Act, 1986. Marks : 16

ಬಾಲಕಾರ್ಮಿಕ (ನಿರ್ಬಂಧ ಮತ್ತು ನಿಯಂತ್ರಣ) ಅಧಿನಿಯಮ, 1986ರ ಉದ್ದೇಶಗಳನ್ನು ವಿಶದೀಕರಿಸಿರಿ.

Q. No. 3. Explain the registration procedure and authorities under the Karnataka Shops and Commercial Establishments Act, 1961. Marks : 16

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯಗಳ ಸ್ಥಾಪನೆ ಕಾಯ್ದೆ, 1961ರ ಅಡಿಯಲ್ಲಿ ನೋಂದಣಿ ಪ್ರಕ್ರಿಯೆ ಮತ್ತು ಪ್ರಾಧಿಕಾರಗಳನ್ನು ವಿವರಿಸಿರಿ.

P.T.O.

Q. No. 4. Explain the various Central Government Schemes provided under the Unorganized Workers, and Social Security Act, 2008, to overcome the problems faced by unorganized workers. Marks : 16
ಅಸಂಘಟಿತ ಕಾರ್ಮಿಕರ ಸಮಸ್ಯೆಗಳನ್ನು ನಿವಾರಿಸಲು ಅಸಂಘಟಿತ ಕಾರ್ಮಿಕರು ಮತ್ತು ಸಾಮಾಜಿಕ ಭದ್ರತೆ ಅಧಿನಿಯಮ, 2008 ರಡಿಯಲ್ಲಿ ನೀಡಲಾಗಿರುವ ಕೇಂದ್ರ ಸರಕಾರದ ಹಲವು ಯೋಜನೆಗಳನ್ನು ವಿವರಿಸಿರಿ.

Q. No. 5. "The Fundamental Rights and Directive principles of state policy are the backbone of Industrial Jurisprudence in India." – Elucidate. Marks : 16
"ಭಾರತದಲ್ಲಿ ಮೂಲಭೂತ ಹಕ್ಕುಗಳು ಮತ್ತು ರಾಜ್ಯನೀತಿಯ ನಿರ್ದೇಶಕ ತತ್ವಗಳು ಔದ್ಯೋಗಿಕ ನ್ಯಾಯಶಾಸ್ತ್ರದ ಬೆನ್ನೆಲುಬು ಆಗಿದೆ." – ವಿಶದೀಕರಿಸಿ.

Q. No. 6. Explain the concept of 'Bonus'. What is the quantum of maximum bonus ? How is it calculated ? Marks : 16
'ಬೋನಸ್ಸು' ಈ ಪದವನ್ನು ವಿವರಿಸಿರಿ. ಬೋನಸ್ಸಿನ ಗರಿಷ್ಠ ಮಿತಿಯೇನು ? ಇದನ್ನು ಹೇಗೆ ನಿರ್ಧರಿಸಲಾಗುತ್ತದೆ ?

Q. No. 7. Define the term "Wages" under the Payment of Wages Act, 1936 and explain the various deductions which are authorized by the Act. Marks : 16
ವೇತನ ಪಾವತಿ ಅಧಿನಿಯಮ, 1936ರಡಿಯಲ್ಲಿ "ವೇತನ" ಈ ಪದವನ್ನು ವ್ಯಾಖ್ಯಾನಿಸಿ ಮತ್ತು ಅಧಿನಿಯಮದಲ್ಲಿ ಅನುಮತಿಸಲಾಗಿರುವ ವೇತನದಲ್ಲಿನ ಹಲವಾರು ಕಡಿತಗಳನ್ನು ವಿವರಿಸಿರಿ.

Q. No. 8. Write short notes on **any two** of the following : Marks : 2×8=16
ಕೆಳಗಿನವುಗಳಲ್ಲಿ ಯಾವುದೇ ಎರಡಕ್ಕೆ ಟಿಪ್ಪಣಿ ಬರೆಯಿರಿ :

a) Objectives of Special Economic Zones Act, 2005.
ವಿಶೇಷ ಆರ್ಥಿಕ ವಲಯಗಳ ಅಧಿನಿಯಮ, 2005ರ ಉದ್ದೇಶಗಳು.

b) Duties of District Magistrate and Vigilance Comittees under Bonded Labour System (Abolition) Act, 1976.
ಜೀತ ಕಾರ್ಮಿಕರ ಪದ್ಧತಿ (ನಿಷೇಧ) ಕಾಯ್ದೆ, 1976ರಡಿಯಲ್ಲಿ ಜಿಲ್ಲಾ ದಂಡಾಧಿಕಾರಿಗಳು ಮತ್ತು ಜಾಗೃತಿ ಸಮಿತಿಗಳ ಕರ್ತವ್ಯಗಳು.

c) Employer's responsibility under Protection of Women Against Sexual Harrassment Act, 2013.
ಲೈಂಗಿಕ ಕಿರುಕುಳದ ವಿರುದ್ಧ ಮಹಿಳೆಯರ ಸಂರಕ್ಷಣೆ ಅಧಿನಿಯಮ, 2013ರಡಿಯಲ್ಲಿ ನಿಯೋಜಕರ ಕರ್ತವ್ಯಗಳು.

Q. No. 9. Solve **any two** of the following problems : Marks : 2×10=20

ಕೆಳಗಿನವುಗಳಲ್ಲಿ ಯಾವುದೇ ಎರಡನ್ನು ಪರಿಹರಿಸಿರಿ :

a) The gratuity amount of a workman was not paid by his employer on the ground that he has caused great loss to the management, due to his negligent activities. Can the workman recover his gratuity amount ? Advice.

ಕಾರ್ಮಿಕನು ತನ್ನ ನಿರ್ಲಕ್ಷತೆಯ ನಡವಳಿಕೆಯ ಪರಿಣಾಮವಾಗಿ ತನ್ನ ಸಂಸ್ಥೆಗೆ ಹೆಚ್ಚಿನ ನಷ್ಟವನ್ನುಂಟು ಮಾಡಿರುವ ಕಾರಣಕ್ಕಾಗಿ ನಿಯೋಜಕನು ಆತನಿಗೆ ಪ್ರೋತ್ಸಾಹ ಭತ್ಯೆ (ಗ್ರಾಚ್ಯುಟಿ)ಯನ್ನು ನೀಡಲು ನಿರಾಕರಿಸುವನು. ಕಾರ್ಮಿಕನು ತನಗೆ ಸಂದಾಯವಾಗಬೇಕಾಗಿರುವ ಪ್ರೋತ್ಸಾಹ ಭತ್ಯೆಯನ್ನು ವಸೂಲಿ ಮಾಡಿಕೊಳ್ಳಬಹುದೇ ? ಸಲಹೆ ನೀಡಿರಿ.

b) 'X' was employed in an Industry and regular wages were paid to him. The Industry got heavy profits during the year. 'X' and others demanded bonus. Advice 'X' and others.

ಉದ್ದಿಮೆಯು 'X' ಅನ್ನುವ ಕಾರ್ಮಿಕನನ್ನು ನಿಯೋಜನೆಗೊಳಿಸಿದ್ದು ಆತನಿಗೆ ನಿರಂತರವಾಗಿ ವೇತನ ಪಾವತಿಯಾಗುತ್ತಿತ್ತು. ಉದ್ದಿಮೆಯು ಇದೀಗ ಒಂದು ವರ್ಷದಲ್ಲಿ ಸಾಕಷ್ಟು ಲಾಭವನ್ನು ಗಳಿಸುತ್ತದೆ. 'X' ಮತ್ತು ಇತರರು ಬೋನಸ್ಸಿಗೆ ಬೇಡಿಕೆಯನ್ನು ಇಡುತ್ತಾರೆ. ಇವರಿಗೆ ಸಲಹೆ ನೀಡಿರಿ.

c) A settlement arrived at between the management and the employees, for the variance in the payment of remuneration between male and female employees performing the same work and work of a similar nature. Women employees question the legality of settlement. Advice them.

ಒಂದು ಸಂಸ್ಥೆಯ ಆಡಳಿತ ಮಂಡಳಿ ಮತ್ತು ನೌಕರರ ನಡುವೆ ಒಂದು ಒಪ್ಪಂದದ ಇತ್ಯರ್ಥದೊಂದಿಗೆ ಪುರುಷ ಮತ್ತು ಮಹಿಳಾ ನೌಕರರು ಮಾಡುವ ಸಮಾನ ಕೆಲಸಕ್ಕೆ ಅಥವಾ ಸಮಾನ ಸ್ವರೂಪದ ಕೆಲಸಕ್ಕೆ ಅವರಿಗೆ ಪ್ರತ್ಯೇಕ ಭಿನ್ನವಾದ ವೇತನ ನಿಗದಿಯಾಗುತ್ತದೆ. ಈ ಅಸಮಾನ ವೇತನ ನಿಗದಿಗೊಳಿಸುವಿಕೆಯನ್ನು ಮಹಿಳಾ ನೌಕರರು ಪ್ರಶ್ನಿಸುವರು. ಅವರಿಗೆ ಸಲಹೆ ನೀಡಿರಿ.

---